# ಗ್ರಂಥಸರಸ್ವತಿ ಪ್ರತಿಭಾರಂಗ (ರಿ), ದಾವಣಗೆರೆ.

# ೫೬೦/೨೧, ಮುಖ್ಯರಸ್ತೆ, ಶಿವಕುಮಾರಸ್ವಾಮಿ ಬಡಾವಣೆ, ದಾವಣಗೆರೆ-೦೪

www:kannadaprapancha.in ಮೊ: 8970948221 email: granthasaraswati68@gmail.com


---

## ಎಸ್.ಎಸ್.ಎಲ್.ಸಿ (ಸ್ಟೇಟ್-ಸಿ.ಬಿ.ಎಸ್.ಸಿ) ಹಾಗೂ ಪಿ.ಯು.ಸಿ (ಕಲೆ-ವಿಜ್ಞಾನ-ವಾಣಿಜ್ಯ)

## ಪ್ರತಿಭಾವಂತ ವಿದ್ಯಾರ್ಥಿಗಳಿಗೆ

## ಗ್ರಂಥಸರಸ್ವತಿ ಕನ್ನಡ ನುಡಿಜಾಣ ಪ್ರಶಸ್ತಿ ಹಾಗೂ ಗ್ರಂಥಸರಸ್ವತಿ ಸಮಗ್ರ ಕರುನಾಡ ಪ್ರಶಸ್ತಿ-೨೦೧೮

## ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ :

ದಾವಣಗೆರೆಯ ಗ್ರಂಥಸರಸ್ವತಿ ಪ್ರತಿಭಾರಂಗವು ಕನ್ನಡನಾಡಿನ ಕಲಾಲೋಕದ ಧ್ರುವತಾರೆಯಂತೆ ಮಿನುಗುತ್ತಿರುವ ಒಂದು ಕ್ರಿಯಾಶೀಲ ಸಂಘಟನೆ. ರಂಗಭೂಮಿ, ಚಲನಚಿತ್ರ, ಚಿತ್ರಕಲೆ, ಸಾಹಿತ್ಯ, ಸಂಗೀತ, ನೃತ್ಯ, ಕೃಷಿ, ಪುಸ್ತಕ ಪ್ರಕಟಣೆ, ಕನ್ನಡನುಡಿ, ಕನ್ನಡಸಿರಿ ತೂಗುಪಂಚಾಂಗಗಳ ಪ್ರಕಟಣೆ, ಕನ್ನಡ ವರ್ಣಮಾಲಾ ಮುಖವಾಡಗಳ ನಿರ್ಮಾಣ, ವಿವಿಧ ಸೃಜನಶೀಲ ಸ್ಪರ್ಧೆಗಳು, ಪ್ರತಿಭಾವಂತರಿಗೆ ಪ್ರಶಸ್ತಿ ಸನ್ಮಾನ ಪುರಸ್ಕಾರ ನೀಡುತ್ತಾ ಬಂದಿದೆ.

ಹೀಗೆ ಹಲವು ಹತ್ತು ಶೈಕ್ಷಣಿಕ ಸಾಹಿತ್ಯಕ ಸಾಂಸ್ಕೃತಿಕ ಕಾರ್ಯಚಟುವಟಿಗೆಗಳ ಮೂಲಕ ಸದಾ ವಿನೂತನವಾದ ಆಲೋಚನೆಯೊಂದಿಗೆ ತನ್ನದೇ ಛಾಪು ಮೂಡಿಸಿರುವ ಗ್ರಂಥಸರಸ್ವತಿ ಪ್ರತಿಭಾರಂಗವು ಆದ ಸಮಾಜಮುಖಿ ಕಾರ್ಯದಲ್ಲಿ ನಿರಂತರ ತೊಡಗಿರುವ ಸಾಂಸ್ಕೃತಿಕ ಸೇವಾಸಂಸ್ಥೆ.

ಇದು ಈ ಹಿಂದೆ ಎಂದೂ ಯಾರೂ ಕಂಡರಿಯದ **'ಕನ್ನಡಕಬ್ಬ ಉಗಾದಿಹಬ್ಬ'** ಎಂಬ ಕಾರ್ಯಕ್ರಮವನ್ನು ಉಗಾದಿಯಿಂದ ಯುಗಾದಿಯವರೆಗೆ ವರ್ಷಂಪೂರ್ತಿ ನಡೆಸುತ್ತ ಸಾಗುತ್ತಿದೆ. ಈ ಕನ್ನಡ ಕಾವ್ಯರಸಧಾರೆ ಕಾರ್ಯಕ್ರಮವು ದಾವಣಗೆರೆಯ ವಿದ್ಯಾನಗರದಲ್ಲಿರುವ ಸುಂದರ ಉದ್ಯಾನವನದ ಕಾವ್ಯಮಂಟಪದಲ್ಲಿ ಪ್ರತಿ ಭಾನುವಾರ ಸಂಜೆ ನಿರಂತರವಾಗಿ ಸಾಗುತ್ತ ಒಂದು ವರ್ಷ ಪೂರೈಸಿ ಎರಡನೆಯ ವರ್ಷದಲ್ಲಿ ಮುನ್ನಡೆಸುತ್ತಿದೆ.

ಅಲ್ಲದೆ ಕಳೆದ ಐದು ವರ್ಷಗಳಿಂದ ನಡೆಸಿಕೊಂಡು ಬರುವಂತೆ ಈ ಬಾರಿಯೂ **ಎಸ್.ಎಸ್.ಎಲ್.ಸಿ (ಸ್ಟೇಟ್-ಸಿ.ಬಿ.ಎಸ್.ಸಿ) ಹಾಗೂ ದ್ವಿತೀಯ ಪಿ.ಯು.ಸಿ (ಕಲೆ-ವಿಜ್ಞಾನ-ವಾಣಿಜ್ಯ) ಪರೀಕ್ಷೆಯಲ್ಲಿ** ಉತ್ತಮ ಸಾಧನೆ ಮಾಡಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರೇರಣೆ ನೀಡುವ ಸಲುವಾಗಿ ಪ್ರಶಸ್ತಿ ನೀಡಿ ಪುರಸ್ಕರಿಸುತ್ತಿದೆ. ಎಸ್.ಎಸ್.ಎಲ್.ಸಿ ಹಾಗೂ ಪಿ.ಯು.ಸಿ ಪರೀಕ್ಷೆಯಲ್ಲಿ ಕನ್ನಡ ವಿಷಯದಲ್ಲಿ **85%** ಅಂಕ ಪಡೆದವರಿಗೆ **'ಗ್ರಂಥಸರಸ್ವತಿ ಕನ್ನಡನುಡಿಜಾಣ ಪ್ರಶಸ್ತಿ** ಹಾಗೂ ಒಟ್ಟು 6 ವಿಷಯಗಳಲ್ಲಿ **85%** ಅಂಕ ಪಡೆದವರಿಗೆ **'ಗ್ರಂಥಸರಸ್ವತಿ ಸಮಗ್ರ ಕರುನಾಡಜಾಣ ಪ್ರಶಸ್ತಿ'** ನೀಡಲಾಗುವುದು.

ಪಾಲ್ಗೊಂಡ ಪ್ರತಿಭಾವಂತರೆಲ್ಲರಿಗೂ **ಆಕರ್ಷಕ ಸ್ಮರಣಿಕೆ, ಅಪರೂಪದ 'ಕನ್ನಡಸಿರಿ' ಟೇಬಲ್ ಕ್ಯಾಲೆಂಡರ್, ಗೌರವದ ಕನ್ನಡಶಾಲು ಹಾಗೂ ಸುಂದರ ಪ್ರಶಸ್ತಿಪತ್ರ** ನೀಡಿ ಗೌರವಿಸಲಾಗುತ್ತದೆ.

ಹಿಂದಿನ ವರ್ಷದಂತೆ ಈ ಬಾರಿಯೂ ಆಯಾ ಭಾಗದವರಿಗೆ ಅನುಕೂಲವಾಗುವಂತೆ ದಾವಣಗೆರೆ, ಹಾವೇರಿ, ಚಿತ್ರದುರ್ಗ, ಮೈಸೂರು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಉಡುಪಿ, ಶಿವಮೊಗ್ಗ, ಬೆಂಗಳೂರು, ತುಮಕೂರು, ಬಳ್ಳಾರಿ, ಧಾರವಾಡ, ಗದಗ ವಿಜಯಪುರ ಹಾಗೂ ಬೆಳಗಾವಿ ಜಿಲ್ಲಾ ಕೇಂದ್ರಗಳಲ್ಲಿ ಪ್ರಮುಖ ಸಾಧಕರು, ಮಠಾಧೀಶರು, ಹಿರಿಯ ಸಾಹಿತಿಗಳನ್ನು ಆಹ್ವಾನಿಸಿ ಪ್ರಶಸ್ತಿ ಪ್ರದಾನ ಸಮಾರಂಭಗಳನ್ನು ನಡೆಸಲಾಗುವುದು.

ಆಸಕ್ತ ಅರ್ಹ ವಿದ್ಯಾಥಿಗಳು ನಿಗದಿತ ಅರ್ಜಿ ನಮೂನೆಯನ್ನು ಆಯಾ ಜಿಲ್ಲಾ ಕೇಂದ್ರಗಳ ಪ್ರಮುಖ ಪುಸ್ತಕ ಅಂಗಡಿಗಳಲ್ಲಿ ದೊರೆಯುತ್ತವೆ. ಅಲ್ಲದೆ ನಮ್ಮ ವಿಳಾಸ # **೫೬೦/೨೧, ಮುಖ್ಯರಸ್ತೆ, ಶಿವಕುಮಾರಸ್ವಾಮಿ ಬಡಾವಣೆ, ೨ ನೆಯ ಹಂತ, ದಾವಣಗೆರೆ** ಇಲ್ಲಿ **ಅಥವಾ** www: kannadaprapancha.in ಅಂತರ್ಜಾಲ ತಾಣದಲ್ಲಿ ನಿಗದಿತ ಅರ್ಜಿ ನಮೂನೆ ಪಡೆದುಕೊಳ್ಳಬೇಕು. ಅರ್ಜಿ ಹಾಕುವಾಗ ತಮ್ಮ ಮಾರ್ಕ್ಸ್‌ಕಾರ್ಡ್ ಜೆರಾಕ್ಸನ್ನು ಅರ್ಜಿಯ ಜೊತೆಗೆ ಸೇರಿಸಿ ಹಾಕಬೇಕು. ಅರ್ಜಿ ಹಾಕಲು ಕೊನೆಯ ದಿನಾಂಕ **ಆಗಸ್ಟ್ 15.** ಆಸಕ್ತ ಪ್ರತಿಭಾವಂತ ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಾಗಿ ವಿನಂತಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ



ಅಧ್ಯಕ್ಷರು

ಆರ್. ಶಿವಕುಮಾರಸ್ವಾಮಿ ಕುರ್ಕಿ